

**ಡಾ। ಸುಧಾಕರ ಶೆಟ್ಟಿ**

ಜನನ : 18–6–1946     ನಿಧನ : 7–2–2011

# ನಿಧನ ವಾರ್ತೆ

## ಡಾ.ಸುಧಾಕರ ಶೆಟ್ಟಿ

ಮಂಗಳೂರು: ನಗರದ ಖ್ಯಾತ ಕೀಲು ಮತ್ತು ಮೂಳೆ ತಜ್ಞ ಡಾ.ಸುಧಾಕರ ಶೆಟ್ಟಿ (66) ಅವರು ಅನಾರೋಗ್ಯದಿಂದ ಸೋಮವಾರ ಬೆಳಿಗ್ಗೆ ಸ್ವಗೃಹದಲ್ಲಿ ನಿಧನರಾದರು.



ಅವರು ತಾಯಿ, ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಯೇನಪೋಯ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಮೂಳೆ ಶಾಸ್ತ್ರ ವಿಭಾಗದ ಮುಖ್ಯಸ್ಥರೂ ಆಗಿದ್ದ ಸುಧಾಕರ ಶೆಟ್ಟಿ, ಹಲವು ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ಶಿಕ್ಷಣ ಪೂರೈಸಿ, ಮುಂಬೈಯ ಜಿ.ಎಸ್.ವೈದ್ಯಕೀಯ ಕಾಲೇಜಿನಲ್ಲಿ ಮೂಳೆಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಡಾ.ಶೆಟ್ಟಿ, ಇಂಗ್ಲೆಂಡ್ ಲಿವರ್‌ಪೂಲ್‌ನ ರಾಯಲ್ ವಿವಿಯಲ್ಲಿ ಉನ್ನತ ಶಿಕ್ಷಣ ಪೂರೈಸಿದ್ದರು. ಕಳೆದ ವರ್ಷ ರಾಜ್ಯ ಸರ್ಕಾರದ 'ವೈದ್ಯರ ದಿನಾಚರಣೆ' ಪ್ರಶಸ್ತಿಗೆ ಪಾತ್ರರಾಗಿದ್ದರು. ಮೂಳೆ ಶಾಸ್ತ್ರ ತಜ್ಞರ ರಾಷ್ಟ್ರೀಯ ಸಂಘ ಪ್ರಾಯೋಜಿಸಿದ 'ಜೀವಮಾನ ಸಾಧನೆ ಪ್ರಶಸ್ತಿ'ಗೆ (2011) ಅವರು ಪುರಸ್ಕೃತರಾಗಿದ್ದರು.

ಅವರ ಅಂತಿಮ ಸಂಸ್ಕಾರ ಸೋಮವಾರ ಹುಟ್ಟೂರು ಮುಂಡ್ಕೂರಿನಲ್ಲಿ ನಡೆಯಿತು.